# ಪ್ರಕಾಶಕರ ಅರಿಕೆ.

---

ನಮ್ಮ ಸಾಹಿತ್ಯ ಮಂದಿರದ ಪ್ರಕಟಣಾ ವಿಭಾಗವು ಚನ್ನಮಲ್ಲಪ್ಪನವರ ಗ್ರಂಥದಿಂದ ಮೊದಲಾದುದು ನಮ್ಮ ಭಾಗ್ಯ. ಅವರ ಕವಿತೆಗಳ ಸವಿಯನ್ನರಿತವರೆಲ್ಲರೂ ಅವರ ಕವನಗಳ ಸಂಗ್ರಹವೊಂದು ಪ್ರಕಟವಾಗಬೇಕೆಂದು ಆಗ್ರಹಪಟ್ಟಿದ್ದರು. ಅದಕ್ಕೆಂದೇ ನಾವೀಗ ಈ ಪುಸ್ತಕವನ್ನು ಪ್ರಸಿದ್ಧಿಸುವದಕ್ಕಾಗಿ ಮುಂದುವರಿದುದು. ನಮ್ಮ ಸಾಹಸದ ಸಾರ್ಥಕ್ಯವು ಓದುಗರ ಉದಾರಾಶ್ರಯವನ್ನವಲಂಬಿಸಿದೆ. "ಉತ್ತರ ಕರ್ನಾಟಕದ ಉದಾತ್ತ ಕವಿಗಳಾದ" ಬೇಂದ್ರೆಯವರ ಮುನ್ನುಡಿಯಲ್ಲಿಯ ಕವಿವಿಷಯಕವಾದ ಸ್ತುತಿಯು ಅತಿಶಯವೆಂದಾಗಲಿ, ವಿಮರ್ಶೆಯು ಔಚಿತ್ಯವನ್ನು ಮೀರಿದೆಯೆಂದಾಗಲಿ ಯಾರೂ ಭಾವಿಸಲಾರರು.

ಜಯಕರ್ನಾಟಕ ಮಂಡಲದವರು ತಮ್ಮ ಗ್ರಂಥಮಾಲೆಯಲ್ಲಿ "ಪೂರ್ವರಂಗ"ವನ್ನು ಪ್ರಕಟಿಸಿದ ನಂತರ ತಾವೇ ಪ್ರಕಟಮಾಡಬೇಕೆಂದೆಣಿಸಿದ "ನನ್ನ ನಲ್ಲ" ಗ್ರಂಥವನ್ನು ನಮಗೆ ಕೊಟ್ಟ ಉಪಕಾರಕ್ಕಾಗಿ ಅವರನ್ನು ಅಭಿವಂದಿಸಬೇಕಾಗಿದೆ.

ತಮ್ಮ ಮಹತ್ವದ ಕಾರ್ಯಗಳನ್ನು ಬದಿಗಿಟ್ಟು ಅಲ್ಪಾವಕಾಶದಲ್ಲಿ ಉತ್ತಮ ಮುನ್ನುಡಿಯನ್ನು ಬರೆದುಕೊಟ್ಟದ್ದಕ್ಕಾಗಿ ಶ್ರೀ ಬೇಂದ್ರೆಯವರಿಗೆ ನಾವು ಉಪಕಾರ ಬದ್ಧರಾಗಿದ್ದೇವೆ. ಮುದ್ರಣದ ವಿಷಯವಾಗಿ ಉತ್ಸುಕತೆಯಿಂದ ಸಲಹೆ ಸಹಾಯಗಳನ್ನು ಒದಗಿಸಿದ ನಮ್ಮ ಸ್ನೇಹಿತರಾದ ಶ್ರೀ ಅ. ಸ. ಕೃಷ್ಣರಾಯರಿಗೆ ಋಣಿಯಾಗಿದ್ದೇವೆ. ಹಸ್ತಪ್ರತಿಯನ್ನು ಬರೆದು ನಮಗೆ ನೆರವಾದ ಸ್ನೇಹಿತ ಶ್ರೀ ಚುಳ್ಕಿಯವರಿಗೆ ನಮ್ಮ ಮನ್ನಣೆಗಳು. ೪-೫ ದಿನಗಳ ಅತ್ಯಲ್ಪ ಅವಧಿಯಲ್ಲಿ ಪುಸ್ತಕವನ್ನು ಮುದ್ದಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಮೋದಿ ಮುದ್ರಣಾಲಯದ ವ್ಯವಸ್ಥಾಪಕರ ಉಪಕಾರ ಮನ್ನಿಸುತ್ತೇವೆ.

ಪುಸ್ತಕ ಪ್ರಕಟಣೆಯ ಮಾತು ಕೃತಿಯಾಗಿ ಪರಿಣಮಿಸುವಂತೆ ಎಲ್ಲರೀತಿಯಿಂದ ನೆರವಾದವರು ಮಿತ್ರರಾದ ಶ್ರೀ ಮಾಳವಾಡರವರು

ಧಾರವಾಡ,<br>
೧೨-೫-೧೯೩೩

**ತರೀಕೆರೆ ಶಿವಲಿಂಗಯ್ಯ**<br>
ಕ. ಸಾ. ಮಂದಿರ

ಶಕುನಕ್ಕೆ ಸಿಕ್ಕಲ್ಲ ಹೊತ್ತಿಗೆಗೆ ಹೊಳದಿಲ್ಲ
ದಿಗ್ದೇಶಯಾತ್ರಿಗಳು ಕಾಣಲಿಲ್ಲ |
ಅಕಟಕಟ ಗತಿಯೇನು ಮುಂದಿನ್ನು ದಿಕ್ಕೇನು
ಎಲ್ಲಿ ಮೊರೆಯಿಡಲಿನ್ನು ತಿಳಿಯದಲ್ಲಾ || ೩೩ ||

ಹರಣ ಹಾರುವ ರೋಗಿ ಕಂಡಕಸ ತಿನುವಂತೆ
ಕಂಡಕಂಡವರ ಕಾಲ್ಗೆರಗುವಂತೆ |
ಮರಣಸಂಕಟಬಟ್ಟು ತಿರುತಿರುಗಿ ಬೇಸತ್ತು
ಸಿಕ್ಕವರು ಸಿಕ್ಕದ್ದು ಹೇಳಿದಂತೆ || ೩೪ ||

ತಿರುಗಿ ಸೊರಗಿದರಿಲ್ಲ ಮರುಗಿ ಮಿಡುಕಿದರಿಲ್ಲ
ಹುಡುಹುಡುಕಿ ಹೈರಣಿಸಿ ದಣಿದರಿಲ್ಲ |
ಬೆರಗಾದೆ ಬೆಪ್ಪಾದೆ ಹೊಲ್ಲಾದೆ ಹುಚ್ಚಾದೆ
ನಲ್ಲನಿಲ್ಲದೆ ಜೀವ ನಿಲ್ಲದಲ್ಲಾ || ೩೫ ||

ಮಾವು ಬೇವಾಯ್ತೆನಗೆ ಸವಿಯು ಕಹಿಯಾಯ್ತೆನಗೆ
ಕೂಳು ನೀರೆನಗೆ ನಂಜಾಯ್ತು ತಾಯೀ |
ಜೀವಸಾಕಾಯ್ತೆನಗೆ ಸಾವು ಬೇಕಾಯ್ತೆನಗೆ
ಜಗವು ಕಿಚ್ಚಿನ ಕೊಂಡವಾಯ್ತು ತಾಯೀ || ೩೬ ||

ಹಿಂದೆ ಹೊರಳುವದರಿದು ಮುಂದೆ ತೆರಳುವದರಿದು
ನಿಂತಲ್ಲಿಯೂ ನೆಚ್ಚಿ ನಿಲ್ಲಲರಿದು |
ಹಿಂದಿಲ್ಲ ಮುಂದಿಲ್ಲ ಅತ್ತಿಲ್ಲ ಇತ್ತಿಲ್ಲ
ಎತ್ತ ನೋಡಿದರತ್ತ ಬರಿದೊ ಬರಿದು || ೩೭ ||

# ದೇವತಾ ಪೃಥಿವೀ

ಮೊಲೆಹಾಲು ಸಾಕವ್ವಾ ಸವಿಲಾಲಿ ಬೇಕವ್ವಾ ।
ಮುದ್ದಾಡಿ ರಮಿಸಿ ಮೈದಡವ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಹೊಟ್ಟೀಗಿ ಹಸುವಿಲ್ಲ ಕರುಳೀಗಿ ಸೊಗಸಿಲ್ಲ ।
ಮೊಲೆ ಸಾಕು ಮುದ್ದುಕೊಡು ತಾಯಿ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಹಸುವೀಗಿ ಮೊಲೆಯುಂಡೆ ಕಸವೀಸಿಗೇನುಳ್ಳೈ ।
ಹಾಲೊಲ್ಲೆ ಸಾಕು ಬಿಗಿದಪ್ಪ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಮೊಲೆಹಾಲು ರುಚಿಗೊಂಡು ಮನದ್ಹಾಲು ಬಯಸೀನ ।
ಗುಟುಗುಟುಕಿಗೊಮ್ಮೆ ಮಿಕಿಮಿಕಿ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಹೂವೀಸ ಮಕರಂದ ಹಂಣಿನ ಮಾಧುರಿಯ ।
ಹಾಲ್ಹೀಂಗ ಇನ್ನ ಮನಹ್ಯಾಂಗ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಚಂದರನ ಚಲುವೀಕಿ ಇಂದರನ ಹೋಲೀಕೀ ।
ಮೈ ಹೀಂಗ ನಿನ್ನ ಮನ ಹ್ಯಾಂಗ । ಏಳವ್ವಾ ।
ಮಲಗಿರುವ ತಾಯಿ ಪೃಥಿವೀ ॥

ಹಿಂದಿತ್ತು ಕಾರಿರುಳೂ ಇಂದೀಗಿ ಹೂಬಿಸಿಲು |
ಅಂದಿಗಿಂದೀಗಿ ಒಂದೇನ ? ! ಏಳವ್ಮಾ ||
ಮಲಗಿರುವ ತಾಯಿ ಪೃಥಿವೀ ||

ಕಣ್ಣು ಅರಳದ ಕೂಸು ಮ್ಯಾಲೆ ಕತ್ತಲೆ ಗವಿಯ |
ಆಗಲ್ಲ ಕಂಡೆ ನಾಸೀಗ | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

ಮೊಲೆಹಾಲ ಧಾರೀಗಿ ಎಲ್ಲೀದೊ ಸೆಲೆಯಂದೆ |
ಆಗೆಲ್ಲಿ ತಾಯೆ ಈ ನೆಲಿಯೆ | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

ಏನಂತೊ ಅಂದಿದ್ದ ತಾಯಂತ ಈಗಂದ |
ಕಣ್ಣೀಲಿ ಕಂಡು ಮನಗಂಡು | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

ಉಂಡದ್ದು ಹೌದವ್ಮಾ ಕಂಡದ್ದು ನಿಜವವ್ಮಾ |
ಉಂಡೇನು ? ಈಗ ಕಂಡೇನು ? | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

ಕತ್ತಲೆಯ ಆ ಸೋಂಕು ಹೂಬಿಸಿಲ ಈ ಮಂಕು |
ಕಪ್ಪೇನು ಮತ್ತ ಬಿಳಪೇನು | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

ಕಾಣದ ಆ ಕುರುಡೂ ಕಾಣೂವ ಈ ಕುರುಡು |
ಕಂಡೇನು ಕಾಣದಿದ್ದೇನು | ಏಳವ್ಮಾ |
ಮಲಗಿರುವ ತಾಯಿ ಪೃಥಿವೀ ||

# ಸುಖ-ದುಃಖ

ಸುಖವು ಜೀದಿಯ ನೆರಳ | ದುಃಖವು ದೂಡುವ ಬಿಸಿಲ |
ಸುಖದುಃಖ ಸಮುಗ ಸರಿಸವನ | ತಂಗೆವ್ವಾ ||
ಒಂದು ಬಿಟ್ಟೊಂದು ದೊರಿಯಾವ || ೧ ||

ಸುಖಕ ಮರುಳಾದೀವ | ದುಃಖಕ ಬ್ಯಾಸತ್ತೀವ |
ಸುಖಬೇಡಿ ಮನವು ಮಲಮಲ | ತಂಗೆವ್ವಾ ||
ದುಃಖನೋಡಿ ಜೀವ ಗಲಬಲ || ೨ ||

ಸುಖವಂತ ಹಿಡಿದೀವ | ದುಃಖವಾಗಿ ಪಡಿದೀವ |
ಹೂವಲ್ಲ ಜಾಣೆ ಹುಳಸೋಡ | ತಂಗೆವ್ವಾ ||
ಬೆಳದಿಂಗಳಲ್ಲ ಉರಿಬಿಸಿಲ || ೩ ||

ಮುತ್ತಂತ ಮುಟ್ಟೀವ | ಕಿಡಿಯಾಗಿ ಕಚ್ಯಾವ |
ಹಣ್ಣಲ್ಲ ಜಾಣೆ ಹಿಡಿಗೆಂಡ | ತಂಗೆವ್ವಾ ||
ಬಳ್ಳಲ್ಲ ಬಿಗಿದ ಬಲಿಸೋಡ || ೪ ||

ನೆಲವಂತ ನಿಂತೀವ | ನೀರಾಗಿ ನುಂಗೀತ |
ಬೆಣ್ಣ್ಯಾಲ ಜಾಣೆ ಬಿಳಿಸುಣ್ಣ | ತಂಗೆವ್ವಾ ||
ಪರಿಮಳವಲ್ಲ ವಿಷಗಾಳಿ || ೫ ||

ಜಪ್ಪೀಸಿ ನಡಿದೀವ | ತಪ್ಪೀಸಿ ಒಯ್ದೀತ |
ನಿಂತ ನಿಂತಲ್ಲೆ ನುಂಗೀತ | ತಂಗೆವ್ವಾ ||
ಒಲ್ಲಂದ ದಿಕ್ಕಿಗೆಳಸೀತ || ೬ ||

